ಅ) ಇಲ್ಲ.

ಆ) ಮೇಲಿನ 'ಅ' ಕ್ಕೆ ನೀಡಲಾದ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಮುಲ್ಲಾಮಾರಿ ಯೋಜನೆಯ ಬಗ್ಗೆ

3071-ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್(ಬಸವಕಲ್ಯಾಣ): ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಅಪ್ಪರ್ ಮುಲ್ಲಾಮಾರಿ ಯೋಜನೆಗೆ ಇದುವರೆವಿಗೂ ಖರ್ಚಾಗಿರುವ ಒಟ್ಟು ಮೊತ್ತವೆಷ್ಟು?

ಆ) ಕಳೆದ ಸಾಲಿನಲ್ಲಿ ಈ ನೀರಾವರಿ ಯೋಜನೆಗೆ ಎಷ್ಟು ಹಣ ನಿಗದಿ ಮಾಡಲಾಯಿತು. ಮತ್ತು ಅದರಲ್ಲಿ ಖರ್ಚಾದ ಹಣವೆಷ್ಟು?

ಇ) ಈ ಕಾಮಗಾರಿಗಳನ್ನು ಪೂರ್ಣಗೊಳಿಸಲು ಇನ್ನೂ ಎಷ್ಟು ಹಣ ಬೇಕಾಗುವುದು ಮತ್ತು ಪೂರ್ತಿ ನೀರಾವರಿ ಯೋಜನೆಯ ಕೆಲಸವನ್ನು ಮುಗಿಸಲು ಸರ್ಕಾರದವರ ಯೋಜನೆ ಏನು?

ಈ) ಇದುವರೆಗೆ ಎಷ್ಟು ಉಪವಿಭಾಗಗಳನ್ನು ಸ್ಥಳಾಂತರಿಸಲಾಗಿದೆ ಹಾಗೇ ಈ ರೀತಿ ಮಾಡಲು ಕಾರಣವೇನು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್(ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು):

ಅ) ರೂ. 14.54 ಕೋಟಿ.

ಆ) 1990-91 ನೇ ಸಾಲಿನಲ್ಲಿ ನಿಗದಿಪಡಿಸಿದ ಹಣ ರೂ. 90 ಲಕ್ಷ ಖರ್ಚಾದ ಹಣ ರೂ. 131 ಲಕ್ಷ

ಇ) ಈ ಕಾಮಗಾರಿಗಳನ್ನು ಪೂರ್ಣಗೊಳಿಸಲು ಇನ್ನೂ ರೂ. 82 ಲಕ್ಷಗಳು ಬೇಕಾಗುವುದು.

1991-92ನೇ ಸಾಲಿನಲ್ಲಿ ಕೆಲಸವನ್ನು ಮುಗಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಈ) ಕೆಲಸಗಳು ಮುಕ್ತಾಯ ಹಂತದಲ್ಲಿರುವುದರಿಂದ ಎರಡು ಉಪ ವಿಭಾಗಗಳನ್ನು ಸ್ಥಳಾಂತರಿಸಲಾಗಿದೆ.

ಚುಳಕೆ ನಾಲೆಯ ಬಗ್ಗೆ

3072-ಶ್ರೀ ಬಸವರಾಜ್ ಪಾಟೀಲ ಅಟ್ಟೂರು(ಬಸವಕಲ್ಯಾಣ): ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಚುಳಕೆ ನಾಲಾ ನೀರಾವರಿ ಯೋಜನೆಗೆ ಹೋದ ವರ್ಷ ಮಂಜೂರಾದ ಹಣವೆಷ್ಟು ಮತ್ತು ಖರ್ಚಾದ ಹಣವೆಷ್ಟು?

ಆ) ಮೇಲಿನ ಯೋಜನೆಗೆ ಹಣ ಮಂಜೂರಾದರೂ ಕೂಡಾ ಕೆಲಸ ಕಾರ್ಯಗಳು ಮಂದಗತಿಯಲ್ಲಿ ನಡೆಯಲು ಕಾರಣವೇನು?

ಇ) ಮಂಜೂರಾದ ಹಣವನ್ನು ಸಹ ಖರ್ಚು ಮಾಡುತ್ತಿರುವುದರ ಬಗ್ಗೆ ಸರ್ಕಾರದ ಕ್ರಮವೇನು?